(ಸದನವು 10-45 ಕ್ಕೆ ಮುಕ್ತಾಯಗೊಂಡು ಅರ್ಧ ಗಂಟೆಯ ನಂತರ ಪುನ: ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು ಮಧ್ಯಾಹ್ನ 1 ಗಂಟೆ 30 ನಿಮಿಷಕ್ಕೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಎಂ.ಪಿ.ವೆಂಕಟಪ್ಪನವರು ಪೀಠದಲ್ಲಿ ಉಪಸ್ಥಿತರಿದ್ದರು)

(ಸದನವು ಪ್ರಾರಂಭವಾದಾಗ ಭಾರತೀಯ ಜನತಾಪಾರ್ಟಿ ಮತ್ತು ಜನತಾದಳ(ಯು) ಹಾಗೂ ಜನತಾದಳ(ಎಸ್) ಪಕ್ಷಗಳ ಸದಸ್ಯರು ಹಾಗೂ ಪಕ್ಷೇತರ ಅಭ್ಯರ್ಥಿ ಶ್ರೀ ಕೆ.ಜಯಪ್ರಕಾಶ್ ಹೆಗಡೆಯವರು ಧರಣಿ ಮಾಡಲು ಸದನದ ಬಾವಿಗೆ ಬಂದರು.)

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್ ಮತ್ತು ಮಾನ್ಯ ಸಿಂಧ್ಯಾರವರು, ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನಾದರೂ ಹೇಳುವುದಾದರೆ ಹೇಳಬಹುದು.

(ಈ ಹಂತದಲ್ಲಿ ಶ್ರೀ ಜಗದೀಶ್ ಶೆಟ್ಟರ್ ಮತ್ತು ಶ್ರೀ ಪಿ.ಜಿ.ಆರ್.ಸಿಂಧ್ಯಾರವರು ಮಾತನಾಡಲು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು.)

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ ಈ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮ ಛೇಂಬರ್‌ನಲ್ಲಿ ಸಾಕಷ್ಟು ಚರ್ಚೆ ಆಯಿತು. ಆದರೆ, ಸದರಿ ಚರ್ಚೆಯಿಂದ ಯಾವುದೇ ರೀತಿಯ ಫಲಶೃತಿ ಮಾತ್ರ ಸಿಗಲಿಲ್ಲ. ಮತ್ತೆ ಕೆಲವೊಂದು ಹೇಳಿಕೆಗಳನ್ನು ಈಗ ಸರ್ಕಾರದವರು ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತಿನ ದಿವಸ ಬರಗಾಲದಿಂದ ನಮ್ಮ ರಾಜ್ಯದ ರೈತರು ಬಹಳ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಬರಗಾಲ ಪರಿಸ್ಥಿತಿಯನ್ನು ಎದುರಿಸಲು ಅನೇಕ ಕಾಮಗಾರಿಗಳನ್ನು ಕೈಗೊಳ್ಳುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಈ ಕೆಲಸ ಈಗಾಗಲೇ ತೀವ್ರಗತಿಯಲ್ಲಿ ಪ್ರಾರಂಭವಾಗಬೇಕಾಗಿತ್ತು. ಆದರೆ, ಇದುವರೆಗೂ ಪ್ರಾರಂಭವಾಗಿಲ್ಲ. ಇದರಿಂದ, ಜಾನುವಾರುಗಳು ಕಸಾಯಿಖಾನೆಗೆ ಹೋಗುತ್ತಿರುವುದು ಮತ್ತು ರೈತರು ಮಹಾರಾಷ್ಟ್ರ ರಾಜ್ಯ ಮತ್ತು ಇತರೇ ಭಾಗಗಳಿಗೆ ವಲಸೆ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇವರಿಗೊಂದು ಕೆಲಸ ಕೊಟ್ಟು ವಲಸೆ ಹೋಗುವುದನ್ನು ತಡೆಯುವುದಕ್ಕೆ ನಿಮ್ಮ ಅಧಿಕಾರಿಗಳಿಂದ ಆಗಿಲ್ಲ. ಇವತ್ತಿನ ದಿವಸ ರೈತ ಮಾಡಿರತಕ್ಕಂಥ ಸಾಲದ ಹಣ ಮತ್ತು ಇದರ ಮೇಲಿನ ಬಡ್ಡಿ ಹಣವನ್ನುತುಂಬಲಾರದಂಥ ಪರಿಸ್ಥಿತಿಯಲ್ಲಿ ರೈತ ಇದ್ದಾನೆ. ಆದ್ದರಿಂದ, ಈ ಸಂದರ್ಭದಲ್ಲಿ ಬಡ್ಡಿ ಹಣವನ್ನು ಮನ್ನಾ ಮಾಡಬೇಕೆಂಬುದು ನಮ್ಮ ಪ್ರಮುಖ ಬೇಡಿಕೆಯಾಗಿದೆ. ರೈತರು ತೆಗೆದುಕೊಂಡಿರತಕ್ಕಂಥ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚಿನ ಹೊರೆ ಏನು ಆಗುವುದಿಲ್ಲ. ಏಕೆಂದರೆ,